# ಕಲೆಗಳು ಮತ್ತು ಸಾಮಾಜಿಕ-ಭಾವನಾತ್ಮಕ ಹಾಗೂ ನೈತಿಕ ಕಲಿಕೆ

ಮಾಲವಿಕಾ ರಾಜನಾರಾಯಣ

ನಾನು ಪ್ರತೀ ತಿಂಗಳು ಕೆಲವು ದಿನಗಳ ಕಾಲ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿನ ಕಲಾ ತರಗತಿಗಳನ್ನು ಗಮನಿಸುತ್ತೇನೆ. ಕಲೆಯ–ಕಲಿಕೆಯ ಪ್ರಕ್ರಿಯೆ ಮತ್ತು ಶಿಕ್ಷಣದ ಉಳಿದೆಲ್ಲ ಅಂಶಗಳ ಜೊತೆಗೆ ಅದು ಹೇಗೆ ಸಂಬಂಧವನ್ನು ಹೊಂದಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಲು ಇದು ಅತ್ಯಂತ ಅಮೂಲ್ಯವೆಂದು ನನಗೆ ಅನ್ನಿಸುತ್ತದೆ. ಸ್ವತಃ ನಾನೇ ಕಲಾ ವಿಷಯದಲ್ಲಿ ಸುಗಮಕಾರಳಾಗಿರುವುದರಿಂದ, ಪ್ರತಿನಿತ್ಯವೂ ಕಲಾ ಶಿಕ್ಷಕರು ಎದುರಿಸುವ ಸವಾಲುಗಳ ಪರಿಚಯ ನನಗೆ ಚೆನ್ನಾಗಿಯೇ ಇದೆ. ನಮ್ಮ ತಂಡವು ಎಲ್ಲ ಅಜೀಂ ಪ್ರೇಮ್‌ಜಿ ಶಾಲೆಗಳ ದೃಶ್ಯ ಕಲೆ ಮತ್ತು ಸಂಗೀತ ಶಿಕ್ಷಕರನ್ನು ಒಳಗೊಂಡಿದೆ. ಶಾಲಾ ಶಿಕ್ಷಣದ ವಿವಿಧ ಹಂತಗಳೆಲ್ಲದರಲ್ಲಿಯೂ ಉತ್ತಮವಾದ ತರಗತಿ ಕೋಣೆ ಅಭ್ಯಾಸ–ಆಚರಣೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಾವು ಕಳೆದ ಐದು ವರ್ಷಕ್ಕೂ ಮೇಲ್ಪಟ್ಟು ನಿರಂತರವಾಗಿ ಕೆಲಸ ಮಾಡುತ್ತ ಬಂದಿದ್ದೇವೆ.

ಕಲೆಯು 'ತಾನೇತಾನಾಗಿ' ಸಾಮಾಜಿಕ–ಭಾವನಾತ್ಮಕ ಹಾಗೂ ನೈತಿಕ ಕಲಿಕೆಯನ್ನು (Socio-Emotional and Ethical Learning – SEEL) ಉತ್ತೇಜಿಸುತ್ತದೆ ಎಂಬ ಊಹೆಯಿದೆ. ಕಲೆಯನ್ನು ಕಲಿಯುವುದರಿಂದ ಏನು ಲಾಭವಿದೆ, ಅದು ಮಕ್ಕಳ ಒಟ್ಟಾರೆ ಬೆಳವಣಿಗೆ ಹಾಗೂ ಯೋಗಕ್ಷೇಮಕ್ಕೆ ಹೇಗೆ ಸಹಾಯ ಮಾಡುತ್ತದೆ ಎನ್ನುವುದರ ಬಗ್ಗೆ ಶಿಕ್ಷಕರು ಹಾಗೂ ಪೋಷಕರಲ್ಲಿ ಅರಿವು ಹೆಚ್ಚುತ್ತಿರುವುದನ್ನು ನಾವು ಇಂದು ನೋಡುತ್ತಿದ್ದೇವೆ. ತಮ್ಮ ಮಕ್ಕಳು ಚೆನ್ನಾಗಿ 'ಚಿತ್ರ ಬರೆಯಲು' ಕಲಿಯಬೇಕೆಂದು ಕೂಡ ಶಿಕ್ಷಕರು ಮತ್ತು ಪೋಷಕರು ಬಯಸುತ್ತಾರೆ. ಹೆಚ್ಚಿನಬಾರಿ ಈ ಎರಡನೆಯ ಆಶೋತ್ತರವು ಕಲಾ ಚಟುವಟಿಕೆಗಳ ಧ್ಯೇಯೋದ್ದೇಶವನ್ನು ಬಹುತೇಕವಾಗಿ ತಾಂತ್ರಿಕ ಕೌಶಲಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದಕ್ಕೆ ಸಂಕುಚಿತ–ಗೊಳಿಸಿಬಿಡುತ್ತದೆ. ಬುನಾದಿ ಹಂತದಲ್ಲಿ (Foundational Stage) ಈ ತಾಂತ್ರಿಕ ಕೌಶಲಗಳು ಸೂಕ್ಷ್ಮ–ಚಲನ ಬೆಳವಣಿಗೆಗೆ (ಕಣ್ಣು–ಕೈಗಳ ನಡುವಿನ ಸಮನ್ವಯತೆ ಮತ್ತು ಸರಳ ಸಾಮಗ್ರಿ, ಉಪಕರಣಗಳ ನಿಯಂತ್ರಣ) ಸಂಬಂಧಿಸಿದ್ದಾಗಿರುತ್ತವೆ. ಇದು ಕೂಡ ಮುಖ್ಯವೇ. ಆದರೂ ಆ ಕುರಿತು ಪ್ರಜ್ಞಾಪೂರ್ವಕವಾಗಿ ಯೋಜಿಸದೇ SEEL ಗೆ ಸಂಬಂಧಿಸಿದಂತೆ ಕೆಲಸ ಮಾಡ–ಬಹುದು ಎಂದು ನಾವು ಆಶಿಸುವಂತಿಲ್ಲ. ಸಾಧಾರಣವಾಗಿ ಮಕ್ಕಳನ್ನು ತೊಡಗಿಸುವ ಚಟುವಟಿಕೆಯೆಂದರೆ, ಕಾರ್ಯ–ಹಾಳೆಗಳಿಗೆ ಬಣ್ಣ ತುಂಬುವುದು. ಬಾಹ್ಯ ರೇಖೆಗಳೊಳಗೆ 'ಸರಿಯಾಗಿ' ಬಣ್ಣ ತುಂಬುವ ಮಕ್ಕಳಿಗೆ ಮಾತ್ರ ಮೆಚ್ಚುಗೆಯು ಸಿಗುತ್ತದೆ. ಆದರೆ ಇಂತಹ ಕಾರ್ಯಹಾಳೆಗಳು ಮಕ್ಕಳಿಗೆ ಸ್ವಂತದ ವಿಚಾರಗಳನ್ನು, ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅನುವು ಮಾಡಿಕೊಡುತ್ತವೆಯೇ? ಒಂದು ಪಕ್ಷ ಮಕ್ಕಳು ಕಾರ್ಯ–ಹಾಳೆಯಲ್ಲಿ ಬಳಸಲು ತಮ್ಮಿಷ್ಟದ ಬಣ್ಣಗಳನ್ನು ಆಯ್ದುಕೊಂಡರು ಎಂದಿಟ್ಟುಕೊಳ್ಳೋಣ. ಆದರೆ ಬಣ್ಣಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಮಗುವಿನ ಆಯ್ಕೆಯು ಅದು ಪ್ರಜ್ಞಾ–ಪೂರ್ವಕವಾಗಿ ವ್ಯಕ್ತಪಡಿಸಲು ಬಯಸುವ ಭಾವ, ಭಾವನೆಗಳಿಗೆ ಅನುರೂಪವಾಗಿರುತ್ತದೆ ಎಂದು ನಾವು ಖಚಿತವಾಗಿ ಹೇಳಬಹುದೇ?

ನಾನು ತೆಗೆದುಕೊಳ್ಳುತ್ತಿದ್ದ ಒಂದು ಕಲಾತರಗತಿಯ ಎರಡನೇ ತರಗತಿಯಲ್ಲಿ ಓದುತ್ತಿದ್ದ ಮಗುವೊಂದು ಸೀಮೆಸುಣ್ಣದಿಂದ ಬಳಪದ ಹಲಗೆಯ ಮೇಲೆ ಚಿತ್ರವೊಂದನ್ನು ಬರೆಯಿತು. ಆ ಚಿತ್ರದಲ್ಲಿ ಒಂದನ್ನೊಂದು ಅಡ್ಡ ಹಾಯುವ ಎರಡು ದಾರಿಗಳು ಬಳಪದ ಹಲಗೆಯನ್ನು ನಾಲ್ಕು ಭಾಗವಾಗಿ ವಿಭಜಿಸುತ್ತಿದ್ದವು. ಅವು ಒಂದನ್ನೊಂದು ಅಡ್ಡ ಹಾಯುವ ಬಿಂದುವಿನ ಬಳಿ ಒಂದು ಬಸ್ ಮತ್ತು ಒಂದು ದ್ವಿಚಕ್ರವಾಹನಗಳಿದ್ದವು. ಈ ದೃಶ್ಯದಲ್ಲಿ ಏನು ನಡೆಯುತ್ತಾ ಇದೆ ಎಂದು ಕೇಳಿದಾಗ, ಆ ಎರಡು ವಾಹನಗಳು ಪರಸ್ಪರ ಢಿಕ್ಕಿ ಆಗಿದ್ದು, ಜನರಿಗೆ ಗಾಯಗಳಾಗಿವೆ, ಆಂಬುಲೆನ್ಸನ್ನು (ambulance) ಕರೆಯಲಾಗಿದೆ, ಜನರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಆ ಮಗುವು ವಿವರಿಸಿತು. ಆ ನಂತರವೂ ಒಂದೆರಡು ತರಗತಿಗಳಾಗುವಷ್ಟರಲ್ಲಿ ಆ ಮಗುವು ಈ ದೃಶ್ಯವನ್ನು ಮತ್ತೆ ಕೆಲವು ಬಾರಿ ಚಿತ್ರಿಸಿತು. ಸ್ವಲ್ಪ ಕಳವಳಕ್ಕೀಡಾದ ನಾನು ತರಗತಿಯ ಶಿಕ್ಷಕರಿಗೆ ಇದನ್ನು ಹೇಳಿದೆ. ಮಗುವು ರಸ್ತೆ ಅಪಘಾತವನ್ನೇನಾದರೂ ನೋಡಿತ್ತೇ, ಅದರಿಂದ ಘಾಸಿಗೊಳಗಾಗಿತ್ತೇ ಎಂದು ಅವರು ಮಗುವಿನ ಆರೈಕೆದಾರರನ್ನು ವಿಚಾರಿಸಿದರು. ಅಂತಹ ಘಟನೆಯೇನೂ ನಡೆದಿಲ್ಲವೆಂದು ಕುಟುಂಬದವರು ನಮಗೆ ಭರವಸೆ ನೀಡಿದರು. ಜೊತೆಗೆ, ಟಿವಿ ನೋಡುವ ಮೂಲಕ ಈ ಕಲ್ಪನೆಯನ್ನು ಮಾಡಿಕೊಂಡಿರಬಹುದು ಎಂದು ಹೇಳಿದರು! ಮಕ್ಕಳು ಹಲವಾರು ವಿಚಾರಗಳಿಗೆ ಹಾಗೂ ಅನುಭವಗಳಿಗೆ ತೆರೆದುಕೊಂಡಿರುತ್ತಾರೆ. ಮುಕ್ತ ಕಲಾ ಚಟುವಟಿಕೆಗಳು ಇಂತಹ ವಿಚಾರ, ಅನುಭವಗಳನ್ನು ಅವರು ವ್ಯಕ್ತಪಡಿಸುವುದಕ್ಕೆ ಅನುವು ಮಾಡಿಕೊಡುತ್ತವೆ. ಅವರು ಬರೆದ ಚಿತ್ರಗಳು, ತುಂಬಿದ ಬಣ್ಣ ಅಥವಾ ಮೂಡಿಸಿದ ಆಕೃತಿ ಇತ್ಯಾದಿಗಳು ಮತ್ತು ಅವರೊಂದಿಗೆ ನಾವು ನಡೆಸುವ ಸಂಭಾಷಣೆಗಳೆರಡರ ಮೂಲಕವೂ ಅವರ ಭಾವನಾತ್ಮಕ ಅಭಿವ್ಯಕ್ತಿಯನ್ನು ಊಹಿಸಬಹುದು, ತೀರ್ಮಾನಿಸಬಹುದು ಅಥವಾ ಅರ್ಥಮಾಡಿಕೊಳ್ಳಬಹುದು. ಮೀನು, ಹೂವು ಅಥವಾ ಚಿಟ್ಟೆಗಳ ಸಿದ್ಧ ಚಿತ್ರಗಳಿರುವ

ಕಾರ್ಯಹಾಳೆಗಳನ್ನು ಕೊಟ್ಟು ಬಣ್ಣ ತುಂಬಲು ಹೇಳಿದರೆ, ವೈಯಕ್ತಿಕ ಮತ್ತು ಭಾವನಾತ್ಮಕ ನಿರೂಪಣೆಗಳಿಗೆ ಆಸ್ಪದವಿರುವುದಿಲ್ಲ.

NCF ನಲ್ಲಿ ಉಲ್ಲೇಖಿಸಲಾದ ಕೆಲವು ವಿಚಾರಗಳನ್ನು ಮತ್ತು ತರಗತಿಕೋಣೆಯಲ್ಲಿ ಅವು ಧ್ವನಿಸುವ ಅರ್ಥಗಳನ್ನು ನೋಡೋಣ.

## ಸಕಾರಾತ್ಮಕ ಸ್ವ-ಪರಿಕಲ್ಪನೆ

ತುಂಬ ಚಿಕ್ಕ ಮಕ್ಕಳು ತಾವು ಗೀಚಿರುವುದನ್ನು ನಮಗೆ ತೋರಿಸಿದಾಗ, ನಾವು ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದಾಗ ಅಥವಾ ಸ್ಪಂದಿಸಿದಾಗ ಅವರಿಗೆ ತಮ್ಮನ್ನು ಅರ್ಥಮಾಡಿಕೊಳ್ಳಲಾಗಿದೆ ಎಂಬ ಭಾವನೆ ಹುಟ್ಟುತ್ತದೆ. ಕೆಲವೊಮ್ಮೆ ಅವರು ಈ ಗೀಚುಗಳ ಸುತ್ತ ತಮ್ಮದೇ ಕಥೆಗಳನ್ನು ಹೆಣೆಯುತ್ತಾರೆ. ಒಮ್ಮೆ ಅವರು ಮುಖಗಳನ್ನು ಚಿತ್ರಿಸಲು ಅಥವಾ ಆಕೃತಿಗಳನ್ನು ಅಂಟಿಸಲು ಆರಂಭಿಸಿದ ಮೇಲೆ, ನಾನು 'ಇವರು ಯಾರು?' ಎಂದು ಕೇಳುತ್ತೇನೆ. ಹೆಚ್ಚು ಜನರು ಅಥವಾ ವಸ್ತುಗಳ ಚಿತ್ರಗಳಿದ್ದಾಗ, 'ಇದರಲ್ಲಿ ನೀನೆಲ್ಲಿದ್ದೀಯಾ? ಈ ಚಿತ್ರದಲ್ಲಿ ಕಾಣುತ್ತಿರುವ ಇತರರು ಯಾರು? ಇದು ನಿನ್ನ ಮನೆಯಾ?/ನಾಯಿಯಾ/ವಸ್ತುವಾ?' ಎಂದು ಕೇಳುತ್ತೇನೆ. ಹೀಗೆ ವಿಚಾರಿಸಿದಾಗ ಅವರು ಸಾಧಾರಣವಾಗಿ ತಮ್ಮ ಕುಟುಂಬದ ಬಗ್ಗೆ ಮತ್ತು ನಿಕಟ ಪರಿಸರದ ಬಗ್ಗೆ ಮಾತನಾಡತೊಡಗುತ್ತಾರೆ.

ಬೇರೆ ಕಲಾ ಶಿಕ್ಷಕರು ಮಕ್ಕಳು ಚಿತ್ರ ಬರೆಯುವಾಗ ಅವರೊಂದಿಗೆ ಮಾತನಾಡುವುದನ್ನು ನಾನು ಗಮನಿಸಿದ್ದೇನೆ. 'ಈ ವ್ಯಕ್ತಿ ಹಾಕಿಕೊಂಡಿರುವ ಬಟ್ಟೆ ಯಾವುದು? ನನಗೆ ತೋರಿಸುತ್ತೀಯಾ? ನಿನ್ನ ಬಟ್ಟೆಗಳನ್ನೇ ನೋಡಿಕೋ.. ಇದಕ್ಕೆ ಒಂದು ಕುತ್ತಿಗೆ ಪಟ್ಟಿಯಿದೆ, ಗುಂಡಿಗಳಿವೆ, ತೋಳುಗಳಿವೆ. ನಿನ್ನ ಚಿತ್ರದಲ್ಲಿರುವ ವ್ಯಕ್ತಿ ಹಾಕಿಕೊಂಡಿರುವುದು ಇಂತಹದೇ ಬಟ್ಟೆಯಾ? ಅದು ಮಗುವಾ ಅಥವಾ ಹಿರಿಯ ವ್ಯಕ್ತಿಯಾ?' ಹೀಗೆ ಅವರಿಂದ ಉತ್ತರಗಳನ್ನು ನಿರೀಕ್ಷಿಸಲು ಮಾಡಿದ ಪ್ರಯತ್ನಗಳ ನಂತರ ಆ ಮಕ್ಕಳು ತಮ್ಮನ್ನೇ ತಾವು ಅಥವಾ ತಮ್ಮ ವಸ್ತುಗಳನ್ನು ನೋಡಿಕೊಳ್ಳುವುದಷ್ಟೇ ಅಲ್ಲ, ಪಕ್ಕದಲ್ಲಿ ಕುಳಿತ ತಮ್ಮ ಸ್ನೇಹಿತರ ಚಿಕ್ಕ ಚಿಕ್ಕ ವಿವರಗಳನ್ನೂ ಗಮನಿಸುತ್ತಾರೆ. ಹೀಗೆ ನಿಕಟವಾಗಿ ಗಮನಿಸಿದ್ದನ್ನು ತಮ್ಮದೇ ರೀತಿಯಲ್ಲಿ ದಾಖಲಿಸುತ್ತಾರೆ. ಇವು ನೈಜವಾಗಿ ಕಾಣಿಸದಿರಬಹುದು. ಆದರೆ ಅವರು ಪಾದರಕ್ಷೆಗಳು, ಕುಂಕುಮ, ಬಳೆಗಳು, ಗುಂಡಿಗಳು, ಕೇಶವಿನ್ಯಾಸ, ಚೀಲಗಳು, ಹಲ್ಲು ಅಷ್ಟೇ ಏನು, ಮುಖದ ಮೇಲಿಂದ ಉರುಳಿ ಬೀಳುತ್ತಿರುವ ಕಣ್ಣೀರಿನ ಬಿಂದುಗಳನ್ನು ಕೂಡ ತೋರಿಸುತ್ತಾರೆ. ಹೀಗೆ, ವಿವರಗಳ ಪ್ರಪಂಚವೇ ತೆರೆದುಕೊಳ್ಳುತ್ತದೆ. ತರಗತಿಯಲ್ಲಿ ಅವುಗಳನ್ನು ಪ್ರದರ್ಶಿಸಿದಾಗ, ಎಲ್ಲರೂ ಅವುಗಳನ್ನು ನೋಡಿದಾಗ, ಅವುಗಳ ಬಗ್ಗೆ ಚರ್ಚಿಸಿದಾಗ ಅವರಿಗೆ ತಮ್ಮದೇ ವಿಚಾರಗಳನ್ನು, ಅಭಿವ್ಯಕ್ತಿಗಳನ್ನು ಬೆಳೆಸಿಕೊಳ್ಳಲು ವಿಶ್ವಾಸ ಮೂಡುತ್ತದೆ ಮತ್ತು ಉತ್ತೇಜನ ದೊರೆತಂತೆ ಅನ್ನಿಸುತ್ತದೆ.











**ಉತ್ತರಕಾಶಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿನ ಎರಡನೇ ತರಗತಿಯ ವಿದ್ಯಾರ್ಥಿಗಳು ರಚಿಸಿದ ಸ್ವಂತದ, ಸ್ನೇಹಿತರ ಕುಟುಂಬದ ಚಿತ್ರಣವಿರುವ ಕಲಾಕೃತಿ**

ತರಗತಿ ಒಂದರ ಸಂಗೀತ ಕೋಣೆಯಲ್ಲಿ ಶಿಕ್ಷಕರೊಬ್ಬರು ಚಪ್ಪಾಳೆಗಳು, ಚಿಟಿಕೆಗಳು, ತೊಡೆಯನ್ನು ಲಘುವಾಗಿ ತಟ್ಟುವುದು, ನಾಲಗೆಯಿಂದ ಕ್ಲಿಕ್ ಎಂದು ಸದ್ದು ಮಾಡುವುದು ಇತ್ಯಾದಿಗಳನ್ನು ಬಳಸಿ ಮಕ್ಕಳಿಗೆ ಸರಳವಾದ ಶಬ್ದ ವಿನ್ಯಾಸಗಳನ್ನು ಕಲಿಸುತ್ತಿದ್ದುದನ್ನು ಗಮನಿಸಿದೆ. 'ನಾಯಕನನ್ನು ಅನುಸರಿಸಿ' ಎಂಬ ವಿಧಾನದಲ್ಲಿ ಇದನ್ನು ಆಡಲಾಗುತ್ತಿತ್ತು. ಅಲ್ಲಿ ಪ್ರತಿಯೊಂದು ಮಗುವಿಗೂ ಆಡುವ ಸರದಿ ಬರುತ್ತಿತ್ತು. ಪ್ರತಿಯೊಂದು ಮಗುವಿಗೂ ತನ್ನದೇ ಆದ ಲಯ, ಗತಿ ವಿನ್ಯಾಸದಲ್ಲಿ ಶಬ್ದಗಳನ್ನು ಹಾಕುವ ಸ್ವಾತಂತ್ರ್ಯವನ್ನು ನೀಡಲಾಗಿದ್ದು ಉಳಿದ ಮಕ್ಕಳು ಅದನ್ನು ಅನುಸರಿಸುತ್ತಿದ್ದರು. ಇಲ್ಲಿ ಪುನಃ ತಮ್ಮ ಬಗ್ಗೆ ಸಕಾರಾತ್ಮಕ ಆಲೋಚನೆಯನ್ನು ಬೆಳೆಸಿಕೊಳ್ಳಲು ಮಕ್ಕಳಿಗೆ ಅವಕಾಶವನ್ನು ನೀಡಲಾಗಿತ್ತು. ಏಕೆಂದರೆ, ಪ್ರತಿಯೊಬ್ಬರ ವಿಚಾರವನ್ನು ಅಲ್ಲಿ ಮಾನ್ಯಮಾಡಲಾಗುತ್ತಿತ್ತು. ಮತ್ತದನ್ನು ಇಡೀ ಗುಂಪು ಪುನರುಚ್ಚರಿಸುತ್ತಿತ್ತು.

## ಭಾವನಾತ್ಮಕ ಅರಿವು ಮತ್ತು ನಿಬಂಧನೆ

ನಾನು ಕಲಾ ಶಿಕ್ಷಕರೊಬ್ಬರ ಜೊತೆಗೆ ಒಂದನೇ ತರಗತಿಗೆ ಹೋದೆ. ಮಕ್ಕಳು ತಮ್ಮತಮ್ಮದೇ ಕಾಗದದ ಹಾಳೆಗಳನ್ನು ಪಡೆದುಕೊಂಡು ಅದರಿಂದ ಏನನ್ನಾದರೂ ಮಾಡಲು ಉತ್ಸುಕರಾಗಿದ್ದರು. ಅದೇ ವೇಳೆಗೆ, ಇಬ್ಬರು ಮಕ್ಕಳು ಬಡಿದಾಡತೊಡಗಿದರು. ಅದರಲ್ಲೊಬ್ಬನಿಗೆ ತುಂಬಾ ಸಿಟ್ಟು ಬಂದು, ಇನ್ನೊಬ್ಬನಿಗೆ ಹೊಡೆದುಬಿಟ್ಟ. ಶಿಕ್ಷಕರು ಮಧ್ಯೆ ಪ್ರವೇಶಿಸಿ, ತಮ್ಮ ತಮ್ಮ ಜಾಗದಲ್ಲಿ ಕುಳಿತುಕೊಳ್ಳುವಂತೆ ಇಬ್ಬರಿಗೂ ಹೇಳಿದರು. ಆದರೂ ವಿವಾದ ಬಗೆಹರಿದಿರಲಿಲ್ಲ. ಸಿಟ್ಟಿಗೆದ್ದಿದ್ದ ಹುಡುಗ ಇನ್ನೂ ಕೋಪ, ಅಸಮಾಧಾನದಲ್ಲಿಯೇ ಇದ್ದ. ದಿನದ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವುದು ಸಮಂಜಸ ಆಯ್ಕೆಯಾಗಿ ಅವನಿಗೆ ತೋರಲಿಲ್ಲ. ತರಗತಿಯ ಉಳಿದ ಮಕ್ಕಳೂ ತಮ್ಮ ಕಾರ್ಯವನ್ನು ಆರಂಭಿಸಲು ಚಡಪಡಿಸುತ್ತಿದ್ದರು. ಶಿಕ್ಷಕರು ಕಲಿಕಾ ಸಾಮಗ್ರಿಗಳನ್ನು ವಿತರಿಸುವುದರಲ್ಲಿ ನಿರತರಾಗಿದ್ದರು.

ಅಸಮಾಧಾನಗೊಂಡಿದ್ದ ಮಗುವನ್ನು ಗಮನಿಸುತ್ತಲೇ ಇದ್ದ ನಾನು ಅವನೊಂದಿಗೆ ಮಾತನಾಡಲು ನಿರ್ಧರಿಸಿದೆ. ನಡೆದುದನ್ನು ನನಗೆ ಹೇಳುವಂತೆ ಕೇಳಿಕೊಂಡೆ. ಆ ಇನ್ನೊಂದು ಮಗು ತನಗೆ ತುಚ್ಛವಾದುದೇನನ್ನೋ ಹೇಳಿದೆ ಎಂದು ಅವನು ದೂರಿದ. 'ಅದರಿಂದ ನಿನಗೆ ಸಿಟ್ಟು ಬಂದಿತೇ?' ಎಂದು ನಾನು ಕೇಳಿದಾಗ ಅವನು ತಲೆಯಾಡಿಸಿದ. 'ಅದಕ್ಕೆ ನೀನು ಅವನಿಗೆ ಹೊಡೆದಿದ್ದಾ?' ನಾನು ಮೆಲ್ಲಗೆ ಕೇಳಿದೆ. ಅವನು ಮತ್ತೆ ತಲೆಯಲ್ಲಾಡಿಸಿದ.

ಅವನಿಗೆ ಇದರಿಂದ ಸಿಟ್ಟು ಬಂತು ಎನ್ನುವುದು ನನಗೆ ಅರ್ಥವಾಗುತ್ತದೆ, ಜನರು ಒರಟಾಗಿ ನಡೆದುಕೊಂಡಾಗ ನನಗೂ ತುಂಬಾ ಸಿಟ್ಟು ಬರುತ್ತದೆ, ಅಸಮಾಧಾನವಾಗುತ್ತದೆ ಎಂದು ನಾನು ಅವನಿಗೆ ಹೇಳಿದೆ. ಅವನು ಅಳಲು ಪ್ರಾರಂಭಿಸಿದ. ಬಹುಶಃ ನಾನು ಅವನನ್ನು ತರಾಟೆಗೆ ತೆಗೆದುಕೊಳ್ಳಲಿಲ್ಲ ಮತ್ತು ಅವನ ಹತಾಶೆಯನ್ನು ಬೇರೊಬ್ಬರು ಅರ್ಥ ಮಾಡಿಕೊಂಡರು ಎಂದು ಅವನಿಗೆ ನಿರಾಳವೆನಿಸಿರಬೇಕು. ಸಿಟ್ಟು ಬಂದಾಗ ಯಾರನ್ನೋ ಹೊಡೆಯುವ ಬದಲು, ಅವನು ಬೇರೆ ಯಾವ ಆಯ್ಕೆಗಳನ್ನು ಮಾಡಿಕೊಳ್ಳಬಹುದು ಎನ್ನುವುದರ ಬಗ್ಗೆ ನಾವು ಮಾತನಾಡಿದೆವು. ಯಾರಾದರೂ ಕೀಳಾಗಿ ಮಾತನಾಡಿದಾಗ, ನಮಗೆ ಅದರಿಂದ ಕೆಟ್ಟದೆನಿಸುತ್ತದೆ, ನೋವಾಗುತ್ತದೆ ಎಂದು ಶಬ್ದಗಳನ್ನು ಬಳಸಿ ಅವರಿಗೆ ಹೇಳುವುದು ಒಂದು ಆಯ್ಕೆ. ಮತ್ತೊಂದು ಆಯ್ಕೆಯೆಂದರೆ, ಆ ಜಾಗವನ್ನು ತೆರವು ಮಾಡಿ ಹೋಗಿ, ಬೇರೆಲ್ಲೋ ಕುಳಿತುಕೊಳ್ಳುವುದು.

ಆ ದಿನ ಚಿತ್ರ ಬಿಡಿಸುವಾಗೆಲ್ಲ ಏನು ನಡೆಯಿತು ಎನ್ನುವುದರ ಬಗ್ಗೆ ಆಲೋಚಿಸುವಂತೆ ನಾನು ಬಡಿದಾಟದಲ್ಲಿ ತೊಡಗಿದ್ದ ಆ ಇಬ್ಬರು ಹುಡುಗರನ್ನೂ ಉತ್ತೇಜಿಸಿದೆ. ಅವರು ಬಿಡಿಸಿದ ಚಿತ್ರಗಳು ಆ ದಿನ ನಡೆದುದರ ಬಗ್ಗೆ ಏನನ್ನೂ ಸೂಚಿಸಲಿಲ್ಲ. ಆದರೆ ಚಿತ್ರ ಬಿಡಿಸಲು, ಬಣ್ಣ ತುಂಬಲು ನೀಡಿದ ಸಮಯವು ಅವರಿಗೆ ಶಾಂತರಾಗಲು, ಮತ್ತೆ ಗಮನವನ್ನು ಕೇಂದ್ರೀಕರಿಸಲು, ತಮ್ಮನ್ನು ಅರ್ಥಮಾಡಿಕೊಳ್ಳಲಾಗಿದೆ ಎಂದು ಅವರಿಗೆ ಅನ್ನಿಸಲು ಸಹಾಯ ಮಾಡಿತು. ತರಗತಿಯಲ್ಲಿನ ಪ್ರತಿಯೊಬ್ಬ ಮಗುವಿನ ಅಗತ್ಯ ಹಾಗೂ ಸಮಸ್ಯೆಗಳನ್ನು ಒಬ್ಬರೇ ನಿಭಾಯಿಸುವುದು ಶಿಕ್ಷಕರ ಪಾಲಿಗೂ ಒಂದು ಸವಾಲೇ ಸರಿ. ಕೆಲವು ಉಪಯುಕ್ತ ಕಾರ್ಯತಂತ್ರಗಳನ್ನು ತಿಳಿದಿದ್ದರೆ, ಬೇಕೆಂದಾಗ ಉಪಯೋಗಿಸಲು ಸಾಧ್ಯವಾಗುವ ಹಾಗೆ ಸಿದ್ಧವಾಗಿಟ್ಟುಕೊಂಡರೆ ಅನುಕೂಲ. ಅವರ ಭಾವನೆಗಳನ್ನು ಗುರುತಿಸಿ ಅಂಗೀಕರಿಸುವುದು ಮತ್ತು ಅವರಿಗೆ ಏನು ಅನ್ನಿಸುತ್ತದೆಯೋ ಅದನ್ನು ತೋರಿಸಲು ಬೇಕಾದ ಶಬ್ದ ಅಥವಾ ಚಿತ್ರಗಳನ್ನು ಹುಡುಕಲು ನೆರವಾಗುವುದು ಅಂತಹ ಕಾರ್ಯತಂತ್ರಗಳಲ್ಲಿ ಒಂದು.

## ಸಾಮಾಜಿಕ ಬೆಳವಣಿಗೆ

ಮಕ್ಕಳು ಒಟ್ಟಾಗಿ ಕೆಲಸ ಮಾಡಲು ಮತ್ತು ಸಾಮಗ್ರಿಗಳನ್ನು ಪರಸ್ಪರ ವಿನಿಮಯಿಸಿಕೊಳ್ಳಲು ಕಲೆಯು ಬಹಳಷ್ಟು ಅವಕಾಶಗಳನ್ನು ಒದಗಿಸುತ್ತದೆ. ನಾನು ಒಂದನೇ ತರಗತಿ ವಿದ್ಯಾರ್ಥಿಗಳ ಗುಂಪೊಂದನ್ನು ಗಮನಿಸುತ್ತಿದ್ದೆ. ಅವರು ಒಟ್ಟಾಗಿ ದೊಡ್ಡದೊಂದು ಚಿತ್ರವನ್ನು ಬಿಡಿಸುತ್ತಿದ್ದರು. ಕೆಲವರು ಮುಂದಾಳತ್ವ ವಹಿಸಿಕೊಂಡು ಹಾಳೆಯ ಮೇಲೆ ವಿವಿಧ ಹರಹುಗಳನ್ನು ಗುರುತು ಮಾಡಿದರು. ಒಂದೊಂದು ಭಾಗವನ್ನು ಗುಂಪಿನ ಒಬ್ಬೊಬ್ಬ ಸದಸ್ಯರಿಗೆ ವಹಿಸಿಕೊಟ್ಟರು. ಒಂದು ಮಗು ಇದ್ಯಾವುದರಲ್ಲಿಯೂ ಭಾಗವಹಿಸದೇ ಕುಳಿತಿರುವುದನ್ನು ನಾನು ಗಮನಿಸಿದೆ. ಏಕೆ ಏನನ್ನೂ ಮಾಡುತ್ತಿಲ್ಲ ಎಂದು ನಾನು ಅವನನ್ನು ಕೇಳಿದೆ. ಅವನು, 'ನನಗೆ ಹೇಗೆ ಚಿತ್ರ ಬಿಡಿಸಬೇಕೆಂದು ಗೊತ್ತಿಲ್ಲ,' ಎಂದು ಹೇಳಿದ. ತಕ್ಷಣವೇ ಗುಂಪಿನಲ್ಲಿದ್ದ ಮತ್ತೆರಡು ಮಕ್ಕಳು 'ಅಕ್ಕಾ ಅವನಿಗೆ ಬರಲ್ಲ,' (ಅಕ್ಕಾ, ಅವನಿಗೆ ಹೇಗೆ ಚಿತ್ರ ಬಿಡಿಸಬೇಕೆಂದು ಗೊತ್ತಿಲ್ಲ) ಎಂದು ಪುನರುಚ್ಚರಿಸಿದವು. ನಾನು ಇದರಿಂದ ವಿಚಲಿತಳಾದೆ. ಅವನಿಗೂ ಚಿತ್ರದ ಹಾಳೆಯಲ್ಲಿ ಸ್ವಲ್ಪ ಜಾಗ ಇರಿಸಿಕೊಳ್ಳಬೇಕೆಂದು ಅವರಿಗೆ ಹೇಳಿದೆ. ಆ ನಂತರ, ಆ ವಿದ್ಯಾರ್ಥಿಗೆ, ಪೆನ್ಸಿಲ್ ಅನ್ನು (ಸೀಸದ ಕಡ್ಡಿಯನ್ನು) ಹಿಡಿದುಕೊಳ್ಳುವುದು ಹೇಗೆಂದು ತಿಳಿದಿದೆಯೇ ಎಂದು ಕೇಳಿದೆ. ತನಗೆ ಗೊತ್ತೆಂದು ಆತ ಹೇಳಿದ. ಹಾಗಿದ್ದರೆ, ಪೆನ್ಸಿಲ್ ಅನ್ನು ಕಾಗದಕ್ಕೆ ತಾಗಿಸಿ, ಕೈಯನ್ನು ಆಡಿಸಬಹುದೇ ಎಂದು ಕೇಳಿದೆ. ತಾನು ಹಾಗೆ ಮಾಡಬಲ್ಲೆನೆಂದು ಅವನು ಉತ್ತರಿಸಿದ. ನಾವೆಲ್ಲರೂ ಚಿತ್ರ ಬಿಡಿಸುವುದು ಹಾಗೆಯೇ, ಅದನ್ನು ಹೇಗೆ ಮಾಡಬೇಕೆಂದು ಅವನಿಗೆ ಗೊತ್ತಿದ್ದರೆ, ಅವನೂ ಚಿತ್ರ ಬಿಡಿಸಬಹುದು ಎಂದು ನಾನವನಿಗೆ ಹೇಳಿದೆ. ಅವನಿಗೆ ಒಂದು ಪೆನ್ಸಿಲ್ ಕೊಟ್ಟು, ಕಾಗದದ ಮೇಲೆ ಅವನದನ್ನು ಹೇಗೆ ಆಡಿಸುತ್ತಾನೆ ಎಂದು ನನಗೆ ತೋರಿಸುವಂತೆ ಹೇಳಿದೆ. ಅವನು ಸಣ್ಣದೊಂದು ಮನೆಯ ಚಿತ್ರವನ್ನು ಬಿಡಿಸಿದ್ದ. ಅದಕ್ಕೆ ಒಂದು ಬಾಗಿಲು ಮತ್ತು ಒಂದು ಕಿಟಕಿ ಇದ್ದವು. ಅವನ ಚಿತ್ರವನ್ನು ನೋಡುವಂತೆ ಇನ್ನುಳಿದ ಮಕ್ಕಳಿಗೆ ಹೇಳಿದೆ. ಅವನು ಚಿತ್ರ ಬಿಡಿಸಬಲ್ಲನೇ ಅಥವಾ ಅವನಿಗೆ ಅದು ಸಾಧ್ಯವಿಲ್ಲವೇ ಎಂದು ಅವರನ್ನು ಕೇಳಿದೆ. ಅವರೆಲ್ಲರೂ ನಸುನಕ್ಕರು ಮತ್ತು ಅವನು ಬಿಡಿಸಬಲ್ಲನೆಂದು ಒಪ್ಪಿದರು.

ಬಹಳಷ್ಟು ಕಲಾ ಶಿಕ್ಷಕರು ನಿಯಮಿತವಾಗಿ ತರಗತಿಯಲ್ಲಿ ಕಲಾಕೃತಿಯನ್ನು ತೋರಿಸಿ, ಅದರ ಬಗ್ಗೆ ಮಾತನಾಡಲು ಸಮಯವನ್ನು ಹೊಂದಿಸಿಕೊಳ್ಳುತ್ತಾರೆ. ಈ ಪ್ರಕ್ರಿಯೆಯಲ್ಲಿ, ಮಕ್ಕಳು ಇತರರು ಹೇಗೆ ಆಲೋಚಿಸುತ್ತಾರೆ, ಅವರಿಗೆ ಹೇಗೆ ಅನ್ನಿಸುತ್ತದೆ ಎಂಬುದನ್ನು ಆಲಿಸುತ್ತಾರೆ ಮತ್ತು ಅದಕ್ಕೆ ಗಮನವನ್ನು ನೀಡುತ್ತಾರೆ. ಹಲವಾರು ರೀತಿಯ ಅಭಿವ್ಯಕ್ತಿಗಳನ್ನು ಗ್ರಹಿಸಲು, ಮೆಚ್ಚಲು ಕಲಿಯುತ್ತಾರೆ. ಎಲ್ಲ ಮಕ್ಕಳೊಂದಿಗೆ ಅದರಲ್ಲಿಯೂ ನಾಚಿಕೆ ಸ್ವಭಾವದ ಅಥವಾ ಕಡಿಮೆ ಆತ್ಮಗೌರವವನ್ನು ಹೊಂದಿರುವ ವಿದ್ಯಾರ್ಥಿಗಳೊಡನೆ ಸಕಾರಾತ್ಮಕ ಸಂಬಂಧಗಳನ್ನು ಬೆಳೆಸಿಕೊಳ್ಳುವಲ್ಲಿ ಶಿಕ್ಷಕರ ಪಾತ್ರವು ಅತ್ಯಂತ ಮುಖ್ಯವಾದುದು. ಶಿಕ್ಷಕರು ಗಮನಿಸುವವರಾಗಿದ್ದರೆ, ಜಾಗ್ರತರಾಗಿದ್ದರೆ ಮತ್ತು ತರಗತಿಯಲ್ಲಿನ ಅಂತರ್ವೈಯಕ್ತಿಕ ಒಡನಾಟಗಳ ರೀತಿನೀತಿಗಳ (dynamics) ಬಗ್ಗೆ ಸೂಕ್ಷ್ಮತೆಯುಳ್ಳವರಾಗಿದ್ದರೆ ಈ ಸಮಸ್ಯೆಗಳಲ್ಲಿ ಹಲವನ್ನು ಪರಿಹರಿಸಬಹುದು. ಕಲಾತರಗತಿಯಲ್ಲಿ SEEL ನ ಅಭಿವೃದ್ಧಿಗೆ ಕೊಡುಗೆ ನೀಡುವ ಪ್ರಮುಖ ಅಂಶಗಳೆಂದರೆ, ಬೋಧನಾಕ್ರಮ ಮತ್ತು ತರಗತಿಯಲ್ಲಿನ ಸುಗಮಗಾರಿಕೆಯೇ ಹೊರತು, ಕೇವಲ ಯಾವುದೇ ಆಕರ್ಷಕ ಕಲಾ ಚಟುವಟಿಕೆ ಮಾತ್ರವಲ್ಲ.



**ಮಾಲವಿಕಾ ರಾಜನಾರಾಯಣ್** ಅವರು ಒಬ್ಬ ದೃಶ್ಯ ಕಲಾವಿದೆ ಮತ್ತು ಗುಜರಾತ್‌ನ ವಡೋದರಾದಲ್ಲಿ ನೆಲೆಸಿರುವ ಶಿಕ್ಷಣತಜ್ಞೆ (educator). ಅವರು ಎಮ್. ಎಸ್. ಯುನಿವರ್ಸಿಟಿ ಬರೋಡದ ಲಲಿತಕಲಾ ವಿಭಾಗದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಅವರು ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ನಡೆಸಿದ್ದು, ಭಾರತದೊಳಗೆ ಹಾಗೂ ಹೊರಗೆ ನಡೆದ ಕಲಾವಿದರ ಸನಿವಾಸ ಕಾರ್ಯಕ್ರಮಗಳಲ್ಲಿ (artist-in-residence programme) ಭಾಗವಹಿಸಿದ್ದಾರೆ. ಅವರು ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲೆಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ. ಜೊತೆಗೆ, ಭೂಪಾಲ್‌ನಲ್ಲಿ ಇರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿಯೂ ಸಂದರ್ಶಕ ಬೋಧಕರಾಗಿದ್ದಾರೆ. ಅವರು ಭಾರತ ಮತ್ತು ಮಧ್ಯ ಏಷಿಯಾದ ಚಿಕಣಿ ಚಿತ್ರಕಲಾ ಸಂಪ್ರದಾಯಗಳ (miniature painting traditions) ಜೊತೆಗೆ ಪ್ರಪಂಚದಲ್ಲೆಡೆಯ ವಿಭಿನ್ನ ತರಹದ ಜವಳಿ ಕಲೆಗಳು ಹಾಗೂ ಕರಕುಶಲ ವಸ್ತುಗಳಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಅವರನ್ನು malavika.rajnarayan@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಸಹನಾ ಹೆಗ್ಡೆ** | ಪರಿಶೀಲನೆ: **ಲತಾ ಕೆ. ಸಿ.**